ಗದ್ಯ–ಪದ್ಯ ಎರಡರಲ್ಲೂ ತಮ್ಮೂರು ಹಾಗೂ ನುಡಿಯ ಸಾಧ್ಯತೆಗಳನ್ನು ಅರಸುತ್ತಿರುವ ಎಚ್.ಆರ್. ಸುಜಾತಾ ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಮರಸುಹೊಸಹಳ್ಳಿಯವರು. ಸದ್ಯಕ್ಕೆ ಬೆಂಗಳೂರಿನವರು. 'ನೀಲಿ ಮೂಗಿನ ನತ್ತು', 'ಕಾಡು ಜೇಡ ಹಾಗೂ ಬಾತುಕೋಳಿ ಹೂ', 'ಜೇನುಮಲೆಯ ಹೆಣ್ಣು', 'ಪದುಮ ಪುರುಷ' ಪ್ರಸಿದ್ಧ ಕೃತಿಗಳು. 'ಮಣಿಮಾಲೆ' ಸಹೃದಯರ ಗಮನ ಸೆಳೆದಿರುವ ಕಾದಂಬರಿ.

ದೊಡ್ಡ ಮರ, ಏನು... ನೆತ್ತಿಗೆ ಹೊಡಿಯೋ ಹಂಗೆ ಘಮ್ ಅನ್ನದು. ಅದ್ರಲ್ಲೂ ಆ ಕೆಂಡಸಂಪಿಗೆ, ಲಿಂಗದ ಹೂವು, ಕಾಡು ಮಾವು, ಪನ್ನೇರಳೆ, ನೇರಳೆ, ಗುಳ್ಳೆ, ಕಾಯಿ, ಗೊಣ್ಣೆ ಹಣ್ಣು, ಸೀಬೆ ಹಣ್ಣಿನ ಮರಗಳು, ಅಯ್ಯೋ ಚಕ್ಕೋತ ನೋಡಬೇಕು ನೀವು ಮರದಲ್ಲಿ... ಏನು ದೇವಿಗೆ ಕೆತ್ತಿರ್ತಾರಲ್ಲ ಎದೇನಾ! ಹಂಗೆ ತೂಗಿ ತೊನಿತಿರವು. ನಮ್ಮೂರಿನ ಗಾಳಿಹದಕ್ಕೆ ಚಕ್ಕೋತ ಏನು ರುಚಿ ಅಂತೀರಾ? ಚಂದ್ರ ಹಲಸಿನ ಮರಗಳು ಬಿಡತಿದ್ದ ಹಣ್ಣ ತಿಂದುಬಿಟ್ರೆ ಬೇರೆ ಹಲಸ್ನ ಹಣ್ಣು ಬಾಯಿಗೆ ರುಚಿನೆ ಹತ್ತಿರ್ಲಿಲ್ಲ ಅನ್ನಳ್ಳಿ, ಬಲು ರುಚಿ...

ಅದರ ನಡುಮಧ್ಯ ಒಂದು ಬೇರು ಹಲಸಿನ ಮರ ಇತ್ತು. ಅದ್ರಲ್ಲಿ ನೆಲದ ಮೇಲೆ ಎದ್ದಿರೋ ಬೇರಿನ ಬೊಡ್ಡೆ ತುದಿಯಿಂದ ನೆತ್ತಿತನಕ ಹಣ್ಣು ಉಚ್ಕೋಗಿರವು. ಪಲ್ಯಕ್ಕೆ, ತಾಳದಕ್ಕೆ ಅಂತ ಹಲಸಿನ ಬಡಕನ್ನ ಊರು ಜನೆಲ್ಲ ಬಂದು ಕುಯಕಂಡ್ಹೂ, ಆ ಮಾತಾಯಿ ವರ ಕೊಡತಲೆ ಇರೋಳು, ನಮ್ಮಜ್ಜಿ 'ಜಲಗೇರಮ್ಮನ ಕಣ್ಣಿರೊ ಮರ ಕಣ ಅದು. ಅದರ ಗೆಣ್ಣುಗೆಣ್ಣಿಗೂ ಹಣ್ಣು ಕಣ, ಎಂಥ ಬರ ಬಂದ್ರೂ ಮಕ್ಕಳು ಹಸಕಂಡಿರಬಾರದು ಅಂತ ಆ ಮರದ ಹಣ್ಣಲಿ ಹಿಂಗೆ ಕಣ್ಣಿಟ್ಟು ಜನಕ್ಕೆ ಹೊಟ್ಟುಂಬುಸೋ ವರ ಕೊಟ್ಟಕಂಡು ಅದ್ರಲ್ಲಿ ಕುಂತವಳೆ ತಾಯಿ, ನಮ್ಮಮ್ಮ ತಾಯಮ್ಮ ನಿನ್ ಮಕ್ಕಿಗೆ ಯಾವ ದೆಸೆಲಾದರೂ ಎದೆ ಹಾಲ ಕರ್ದು ನಮ್ಮಗಳ ಬತ್ತದಂಗೆ ಕಾಪಾಡತಿಯಲ್ಲಮ್ಮ' ಅಂತ ಹಾಡೇಳಕಂಡು ಕೈ ಮುಗಿದು, ಆಮೇಲೆ ಕಾವಲೆ ನೀರ ಕುಡದು 'ಓಮ' ಅಂತಿತ್ತು...

ಕೆಮ್ಮಾಗುತ್ತೆ ಅಂತ ನಮ್ಮನೇಲಿ ನಾಯಿನೇರಳೆ ಮಾತ್ರ ತಿನ್ನಕ್ಕೆ ಬಿಡತಿರ್ಲಿಲ್ಲ. ಮೂರೇ ಮೂರು ಜಂನೇರಳೆ ಮರ ಇದ್ದವು ಇಲ್ಲಿ. ನಮ್ಮ ಚಿಗಪ್ಪಾರ ಮಗ ಕೊಂಬೆ ಕೊಂಬೇನೆ ಮುರ್ದುಕೊಡೋನು. ಹಣ್ಣು ಲಂಗಕ್ಕೆ ತುಂಬ್ಕಂಡು ಹೋದ್ರೆ ಬಟ್ಟೆ ಎಲ್ಲ ಕರೆ ಆಗಿ ನಮ್ಮಮ್ಮನ ಕೈಲಿ ಗುದ್ದುಸ್ಕೋತಿದ್ವಿ. ಒಂದೊಂದು ದಿನ ನಮ್ಮಜ್ಜಿ ಧೂಪದ ಮರದ ಗೆಣ್ಣಲ್ಲಿ ಒಂದು ಕಚ್ಚುಹಾಕಿ ಬಿಟ್ಟುಹೋಗಿರದು. ನಾಳೆಬಂದ್ರೆ ಧೂಪ ಕಲ್ಲಾಗಿ ಮರದ ಗಾಯಕ್ಕೆ ಅಂಟಕಂಡಿರದು, ಅದನ್ನ ತಂದು ಕೆಂಡದ ಮೇಲೆ ಹಾಕ್ದ ಅಂದ್ರೆ ಮನೆಯೆಲ್ಲ ಘಂ ಅನ್ನದು. ನೊಣ, ನುಸಿ ನಾಪತ್ತೆ ಆಗವು ಗೀತಾವ್ರೆ. ಸ್ಕೂಲಿಗೆ ಹೋಗುವಾಗ ಇಂಥದ್ದೇ ಇನ್ನೊಂದು ಮರ ನೋಡಿದ್ರಿ. ಇಸ್ಕೋ ಇರೋ ಜಾಗದಲ್ಲಿ. ಆ ಮರದಲ್ಲಿ ಕಚ್ಚು ಹಾಕಿದ್ರೆ ಸಾಕು ಅಂಟು ಬರದು, ಆ ಗೋಂದು ತಂದು ನಾವು ಕರಗ್ಸಿ... ಹರಿದು ಹೋಗಿರೋ ಪುಸ್ತಕ ಅಂಟುಸ್ಕಳ್ತಿದ್ವಿ. ಏನೂ ಉಳಿದಿಲ್ಲ ಈಗ, ಜಮೀನು, ಮನೆಗಳು, ದನಗಳು, ಎಲ್ಲ...

ಯಾವ್ಯಾವ ಕಡೆಯಿಂದಲೋ ಬಂದ ಬೇರೆ ಭಾಷೆಯೋರ ಪಾಲಾಗೋಯ್ತು. ನಾವು ಕನ್ನಡದೋರು ನೋಡಿ... ಕೊಂಪೆಯಾಗಿ ಹೋಗಿರೋ ನಮ್ಮೂರಿನ ಕೋಳಿಗೂಡಂಗೆ ಉಳಕಂಡಿರೋಂಥ ಮನೇಲಿ ವಾಸ ಮಾಡೋ ಹಂಗಾಯ್ತು.'

ಪದ್ಮಳ ಮಾತಿನಲ್ಲಿ, ನೋವು ನಿಟ್ಟುಸಿರಾಗಿತ್ತು. ಗೀತಾಳೂ ಒಂದುಸಿರು ದಬ್ಬಿದಳು.

'ಮೊದ್ಲು, ನಮ್ಮೂರು ಸೊಲ್ಪ ಎತ್ತರದಲಿತ್ತು. ಆಮೇಲಾಮೇಲೆ ಕೆಳಗಡೆಗೆ ಬಂದು ಮನೆ ಕಟ್ಕಂಡ್ವಿ. ರೈಲು ಹಳಿ ಆದಮೇಲೆ ಊರು ಆ ಕಡೆ ಈ ಕಡೆಗೆ ಚೆದುರಿ ಹೋಯ್ತು. ನಮ್ಮೂರಲ್ಲಿ, ನಮ್ಮಪ್ಪರ ಕಾಲದಲ್ಲಿ ನಮ್ಮೂನೋರ್ರೊಬ್ಬರು ರೈಲು ಬರೋದನ್ನ ನೋಡಿ 'ಇದು ಸಾವರಪದಿಯಂಗೆ ಹರಿತದಲ್ಲಾ! ಅದನ್ನ ನೋಡೇ ಏನಾರ ಬಿಳಿ ಸಾಹೇಬ್ರುಗಳು ಕಬ್ಬಿಣ ಕುಟ್ಟಿ ಇದ ಮಾಡವರಾ... ನೀ ಏನೇ ಹೇಳು... ಅವ್ರಿಗೆ ತಲೆ ಜಾಸ್ತಿ' ಅನ್ನವ್ರಂತೆ...

ಗೀತಾ ಕೇಳಿದಳು– 'ಸಾವಿರಪದಿ ಮೀನ್ಸ್ ಸೆಂಟ್ರಿಪೀಡ್... ಅದೇ ಕಪ್ಪರ ಶುಂಠಿ' ಪದ್ಮ ತಲೆ ಕುಣಿಸಿ ಮುಂದುವರೆಸಿದಳು.

'ಹುಂ ಅದೆ, ಅದೆ! ಮುಟ್ಟಿದಪಟ್ಟಿಗೆ ಸುತ್ತು ಹಾಕಂಬುಡುತ್ತೆ. ಅದಕ್ಕೆ ಸಾವ್ರಕಾಲು ಇರ್ತವೆ, ಅದಕ್ಕೆ ಸಹಸ್ರಪದಿ, ಸಾವ್ರಪದಿ ಅಂತರೆ, ಇಂಥ ರೈಲು ಹತ್ತಿ